ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001**

ಸಂಖ್ಯೆ: ಸಿ7(2)ಪ್ರಾಶಿಅ/ರಾ.ಮ.ಹ.ರ.ಆ/ದೂರು/58/2019–20, ದಿನಾಂಕ:13–08–2019

**: : ಸುತ್ತೋಲೆ : :**

Subject: complaints against eazy shopee for violating Karnataka education act in collusion with several schools fleecing parents.

Reference: 1. National Commission for Protection of Child Rights, New Delhi: File No.KT-84803/2017-18/NCPCR/RTE Dated 24-05-2019.

2. High Court of Karnataka Writ Petition Nos. 21375-23180/2017(EDN-RES) Order Dated 29th May 2017.

3. The Karnataka Educational Institutions (Classification, Regulation and Prescription of Curricula ETC.,) Rules- 1995.

4. Govt Notification No. ED 04 Mahiti 2017, Dated 03-03-2017.

5. ಈ ಕಛೇರಿ ಸುತ್ತೋಲೆ ಸಂಖ್ಯೆ: ಸಿ7(8)ಆರ್.ಟಿ.ಇ/ಪ್ರ.ಪ್ರ/2017–18, ದಿನಾಂಕ:02–05–2017.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಮೆ॥ ಸುಭಾಷ್ ಪಬ್ಲಿಕೇಷನ್ಸ್ ಮತ್ತು ಅದರ ಸಂಬಂಧಿತ ಕಂಪನಿಗಳೊಂದಿಗೆ ಈಜೀಶಾಪ್ ಮುಖಾಂತರ ಕೆಲವು ಶಾಲಾ ಆಡಳಿತ ಮಂಡಳಿಗಳು ಮತ್ತು ಕಂಪನಿಯ ವ್ಯವಸ್ಥಾಪಕರುಗಳೊಂದಿಗೆ ಒಪ್ಪಂದ ಮಾಡಿಕೊಂಡು ಈ ಕಂಪನಿಗಳಿಂದ ಮುದ್ರಿತವಾಗಿರುವ ಪುಸ್ತಕಗಳನ್ನು ತಂದು ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಶಾಲೆಯಿಂದ ಮಾರಾಟ ಮಾಡುವ ಮುಖಾಂತರ ಭ್ರಷ್ಟಾಚಾರ ಮಾಡುತ್ತಿದ್ದು, ಈ ಮಾಹಿತಿಯು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ತಿಳಿದಿದ್ದು, ಇದು ಕರ್ನಾಟಕ ಶಿಕ್ಷಣ ಕಾಯ್ದೆ ಉಲ್ಲಂಘನೆಯಾಗಿರುತ್ತದೆ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ದಾವೆಯ ಸಂಖ್ಯೆ: ರಿಟ್ ಪಿಟಿಷನ್. 23375–380/2017, ದಿನಾಂಕ:29–05–2017 ರಲ್ಲಿ ನೀಡಿರುವ ಆದೇಶದ ಉಲ್ಲಂಘನೆಯಾಗಿರುತ್ತದೆಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಲ್ಲಿ ಉಲ್ಲೇಖ(1) ರಂತೆ ದೂರನ್ನು ದಾಖಲಿಸಿರುತ್ತಾರೆ.

ಉಲ್ಲೇಖ(2)ರ ಉಚ್ಚ ನ್ಯಾಯಾಲಯದ ದಾವೆ ಸಂಖ್ಯೆ: ರಿಟ್ ಪಿಟಿಷನ್: 21375–23180/2017(ಇಡಿಎನ್–ಆರ್ಇಎಸ್) ರ ದಿನಾಂಕ:29–05–2017ರ ಆದೇಶ ಕೆಳಕಂಡಂತಿರುತ್ತದೆ.

Accordingly, these writ petitions stand dismissed as having become infructuous.

ಉಲ್ಲೇಖ(3)ರ The Karnataka Educational Institutions (Classification, Regulation and Prescription of Curricula ETC.,) Rules -1995 ರ ನಿಯಮ 11(3)ರಲ್ಲಿ ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.

**11. Provision of Uniform, clothing, Text Books etc.,** (3) Purchase of uniform clothing and text books from the school or from a shop etc.,suggested by school authorities and stitching of uniform clothing with the tailors suggested by the school authorities shall be at the option of the student or his parent. The school authorities shall make no compulsion in this regard.

ರಾಜ್ಯದಲ್ಲಿ ಖಾಸಗಿ ಅನುದಾನ ರಹಿತ ಶಾಲೆಗಳು ಶಾಲೆಗಳನ್ನು ನೊಂದಣಿ ಮತ್ತು ಅನುಮತಿ ಪಡೆಯುವಾಗ ಇಲಾಖೆಯ ನಿಯಮಗಳಿಗೆ ಬದ್ಧರಾಗಿರುತ್ತೇವೆ ಎಂದು ದೃಢೀಕರಣವನ್ನು ನೀಡಲಾಗಿರುತ್ತದೆ. ಹಾಗೂ ಕೇಂದ್ರ ಪಠ್ಯಕ್ರಮ ಶಾಲೆಗೆ ಸಂಯೋಜನೆಗೆ ಎನ್.ಓ.ಸಿ.ಪಡೆಯುವಾಗಲೆ ಕನ್ನಡವನ್ನು ಬೋಧಿಸಲಾಗುವುದುಎಂದು ದೃಢೀಕರಿಸಿ ಸಲ್ಲಿರುವುದನ್ನು ಗಮನಕ್ಕೆ ತರಲಾಗಿದೆ. ಆದರೂ ಇಲಾಖೆಯೂ ರಾಜ್ಯ ಪಠ್ಯಕ್ರಮ ಬೋಧಿಸುವ ಶಾಲೆಗಳು, ರಾಜ್ಯ ಸರ್ಕಾರ ನಿಗಧಿಪಡಿಸಿರುವ ಪಠ್ಯಕ್ರಮದ ಹೊರತಾಗಿ ಬೇರೆ ಪಠ್ಯಕ್ರಮಗಳನ್ನು ಬೋಧಿಸುತ್ತಿರುವುದು ಹಾಗೂ ಕೇಂದ್ರ ಪಠ್ಯಕ್ರಮ ಬೋಧಿಸುವ ಶಾಲೆಗಳು ಎನ್.ಸಿ.ಇ.ಆರ್.ಟಿ ಪಠ್ಯಕ್ರಮವನ್ನು ಬೋಧಿಸದೇ ಬೇರೇ ಪಠ್ಯಕ್ರಮಗಳನ್ನು ಬೋಧಿಸುತ್ತಿರುವ ಬಗ್ಗೆ ಅನೇಕ ಪೋಷಕರ ದೂರುಗಳ ಹಿನ್ನೆಲೆಯಲ್ಲಿ ಉಲ್ಲೇಖ(4)ರ ಸರ್ಕಾರದ ಆದೇಶದಂತೆ ರಾಜ್ಯದ ಯಾವುದೇ ಖಾಸಗಿ ಶಾಲೆಯು ಪಠ್ಯಪುಸ್ತಕಗಳನ್ನು, ನೋಟ್‌ಪುಸ್ತಕಗಳನ್ನು, ಸಮವಸ್ತ್ರಗಳನ್ನು ಮತ್ತು ಇತರೆ ಲೇಖನ ಸಾಮಗ್ರಿಗಳನ್ನು ನಿರ್ಧಿಷ್ಠ ಮಾರಾಟಗಾರರಿಂದ ಖರೀದಿಸುವಂತೆ ಪಾಲಕರಿಗೆ ಒತ್ತಾಯಿಸುವುದನ್ನು ಅಥವಾ ಅವುಗಳನ್ನು ಶಾಲೆಯಿಂದಲೇ ಪಡೆಯುವಂತೆ ಒತ್ತಾಯಿಸುವುದನ್ನು ನಿರ್ಬಂಧಿಸಿ ಆದೇಶಿಸಲಾಗಿದೆ.

ತರಗತಿಗೆ ನಿಗಧಿಪಡಿಸಿದ ಪಠ್ಯಪುಸ್ತಕಗಳನ್ನು, ನೋಟ್ ಪುಸ್ತಕಗಳನ್ನು, ಸಮವಸ್ತ್ರಗಳನ್ನು ಮತ್ತು ಇತರೆ ಲೇಖನ ಸಾಮಗ್ರಿಗಳನ್ನು ಮುಕ್ತ ಮಾರುಕಟ್ಟೆಯಿಂದ ಖರೀದಿಸಲು ಪೋಷಕರು ಸ್ವತಂತ್ರರಾಗಿರುತ್ತಾರೆ. ಈ ಬಗ್ಗೆ ಉಲ್ಲೇಖ(5)ರ ಈ ಕಛೇರಿಯ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಆದರೂ ಕೆಲವು ಆಡಳಿತ ಮಂಡಳಿಗಳು ಶಾಲೆಗಳಲ್ಲಿ ಮೆ॥ ಸುಭಾಷ್ ಪಬ್ಲಿಕೇಷನ್ಸ್ ಮತ್ತು ಅದರ ಸಂಬಂಧಿತ ಕಂಪನಿಗಳೊಂದಿಗೆ ಈಜೀಶಾಪ್ ಮುಖಾಂತರ ಹಾಗೂ ಕೆಲವು ಪಠ್ಯಪುಸ್ತಕ ಮುದ್ರಿಸುವ ಪಬ್ಲಿಕೇಷನ್ಸ್ ಕಡೆಯಿಂದ ಕೆಲವು ಶಾಲಾ ಆಡಳಿತ ಮಂಡಳಿಗಳು ಮತ್ತು ಕಂಪನಿಯ ವ್ಯವಸ್ಥಾಪಕ -ರುಗಳೊಂದಿಗೆ ಒಪ್ಪಂದ ಮಾಡಿಕೊಂಡು ಪೋಷಕರಿಗೆ ಸದರಿ ಕಂಪನಿಗಳು ಮುದ್ರಿಸಿರುವ ಪುಸ್ತಕಗಳನ್ನು ಖರೀದಿಸಲು ಸೂಚಿಸುತ್ತಿರುವುದು ಇಲಾಖೆಯು ನೀಡಿರುವ ಮಾರ್ಗಸೂಚಿ ಹಾಗೂ ಸರ್ಕಾರದ ಆದೇಶಗ ಹಾಗೂ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.

ಈಗಾಗಲೇ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು ಈ ಸಂಬಂಧ ಇಂತಹ ಕೆಲವು ಶಾಲಾ ಆಡಳಿತ ಮಂಡಳಿಗಳ ಮೇಲೇ ದೂರು ದಾಖಲಿಸಿರುತ್ತದೆ. ಆದ್ದರಿಂದ ಇನ್ನು ಮುಂದೆ ರಾಜ್ಯ ಸರ್ಕಾರ ಪಠ್ಯಕ್ರಮ ಬೋಧಿಸುವ ಶಾಲೆಗಳು ಇಲಾಖೆಯು ನಿಗಧಿಪಡಿಸಿರುವ ಪಠ್ಯಕ್ರಮವನ್ನೇ ಬೋಧಿಸತಕ್ಕದ್ದು, ಕೇಂದ್ರ ಪಠ್ಯಕ್ರಮದ ಶಾಲೆಗಳು ಕೇಂದ್ರ ಸಂಶೋಧನಾ ಮತ್ತು ಶಿಕ್ಷಣ ತರಬೇತಿ ಕೇಂದ್ರ (ಎನ್.ಸಿ.ಇಆರ್,ಟಿ) ನಿಗಧಿಪಡಿಸಿರುವ ಪಠ್ಯಕ್ರಮಗಳನ್ನೇ ಬೋಧಿಸುವುದು. ಒಂದು ವೇಳೆ ಬೇರೇ

ಪಠ್ಯಕ್ರಮವನ್ನು ಬೋಧಿಸುವುದು ಕಂಡುಬಂದಲ್ಲಿ ಅಂತಹ ಶಾಲೆಗಳಿಗೆ ನೀಡಲಾದ ಮಾನ್ಯತೆ ಅಥವಾ ಕೇಂದ್ರ ಪಠ್ಯಕ್ರಮ ಸಂಯೋಜನೆ ಶಾಲೆಗಳ ಮೇಲ್ವಿಚಾರಣೆಯೂ ಆಯಾ ರಾಜ್ಯ ಸರ್ಕಾರಗಳು ಅಥವಾ ಕೇಂದ್ರ ಆಡಳಿತ ವ್ಯಾಪ್ತಿಗೆ ಬರುತ್ತದೆಂದು ಈಗಾಗಲೇ ಕೇಂದ್ರ ಪಠ್ಯಕ್ರಮ ಬೈಲಾದಲ್ಲಿ ತಿದ್ದುಪಡಿಯಾಗಿರುತ್ತದೆ. ಆದ್ದರಿಂದ ರಾಜ್ಯದಲ್ಲಿರುವ ಕೇಂದ್ರ ಪಠ್ಯಕ್ರಮ ಬೋಧಿಸುತ್ತಿರುವ ಶಾಲೆಗಳ ನಿರಾಕ್ಷೇಪಣಾ ಪತ್ರವನ್ನು ಹಿಂಪಡೆಯುವುದರ ಜೊತೆಗೆ ಇಂತಹ ಶಾಲೆಗಳ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

ಯಾವುದೇ ಕಾರಣಕ್ಕೂ ರಾಜ್ಯದ ಯಾವುದೇ ಖಾಸಗಿ ಶಾಲೆಯು ಪಠ್ಯಪುಸ್ತಕಗಳನ್ನು, ನೋಟ್‌ಪುಸ್ತಕಗಳನ್ನು,ಸಮವಸ್ತ್ರಗಳನ್ನು ಮತ್ತು ಇತರೆ ಲೇಖನ ಸಾಮಗ್ರಿಗಳನ್ನು ನಿರ್ಧಿಷ್ಠ ಮಾರಾಟಗಾರರಿಂದ ಖರೀದಿಸುವಂತೆ ಪಾಲಕರಿಗೆ ಒತ್ತಾಯಿಸುವುದನ್ನು ಅಥವಾ ಅವುಗಳನ್ನು ಶಾಲೆಯಿಂದಲೇ ಪಡೆಯುವಂತೆ ಒತ್ತಾಯಿಸುವುದನ್ನು ನಿರ್ಬಂಧಿಸಿ ಆದೇಶಿಸಲಾಗಿದೆ.

ಈ ಮಾಹಿತಿಯು ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗಳಿಗೆ ಪರೋಕ್ಷವಾಗಿ ಸಹಕಾರ ನೀಡುತ್ತಿರುವುದನ್ನು ಸಹಾ ಕಡ್ಡಾಯವಾಗಿ ನಿಷೇಧಿಸಲಾಗಿದೆ. ಇನ್ನು ಮುಂದೆ ಇಂತಹ ದೂರುಗಳು ಬಂದಲ್ಲಿ ಆಯಾ ಶಾಲಾ ಆಡಳಿತ ಮಂಡಳಿ, ಮುಖ್ಯಸ್ಥರು ಹಾಗೂ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳ ಮೇಲೆ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

19/8/19

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,

ಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಇವರಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ತಾಲ್ಲೂಕು/ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಖಾಸಗಿ ಅನುದಾನರಹಿತ ಶಾಲೆಗಳ ಆಡಳಿತ ಮಂಡಳಿಗಳು/ಮುಖ್ಯಸ್ಥರಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01 ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಖೆ, ಧಾರವಾಡ/ ಕಲಬುರಗಿ.
3. ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ
4. ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ
5. ಕಛೇರಿ ಪ್ರತಿ.